
ಸರ್ವಧರ್ಮಸಮ್ಮೇಳದಲ್ಲಿ
ನಿಸ್ಸಂದೇಹವಾಗಿ ಇವರೊಬ್ಬ ಶ್ರೇಷ್ಠ
ವ್ಯಕ್ತಿ. ಇವರ ಉಪನ್ಯಾಸವನ್ನು
ಕೇಳಿದ ಮೇಲೆ, ಇಂತಹ ಜ್ಞಾನಿಗಳ
ದೇಶಕ್ಕೆ, ಮತಪ್ರಚಾರಕ್ಕಾಗಿ
ಬೋಧಕರನ್ನು ಕಳುಹಿಸುವುದು
ಮೂರ್ಖತನವೆನಿಸಿತು.
ಸ್ವಾಮಿ ವಿವೇಕಾನಂದರಂತಹ
ಸಂನ್ಯಾಸಿಯನ್ನು ಜಗತ್ತಿಗೆ
ನೀಡಿರುವ ಹಿಂದೂಧರ್ಮದ
ಹಿರಿಮೆ ಅದೆಷ್ಟಿರಬಹುದು?
ಸಮ್ಮೇಳನದ ಮುಕ್ತಾಯದ ನಂತರ, ಸ್ವಾಮೀಜಿ
ಅಮೆರಿಕದ ದೊಡ್ಡ ದೊಡ್ಡ ನಗರಗಳಲ್ಲಿನ ವಿವಿಧ
ಸಂಘ ಸಂಸ್ಥೆಗಳ ಒತ್ತಾಯದ ಮೇರೆಗೆ ಅಹ್ವಾನ
ಗಳನ್ನು ಸ್ವೀಕರಿಸಿ, ಉಪನ್ಯಾಸಗಳನ್ನು ಮಾಡುತ್ತ
ಸಂಚರಿಸಿದರು. ಭಾರತದ ಹಿರಿಮೆಗರಿಮೆಗಳನ್ನೂ
ಭಾರತೀಯ ಸಂಸ್ಕೃತಿ, ಅದರ ವೈಭವ ಹಾಗೂ
ಆಧ್ಯಾತ್ಮಿಕ ವಿಷಯಗಳ ಮೇಲೆ ಭಾಷಣಗಳನ್ನಿತ್ತರು.
೧೮೯೫ನೇ ಆಗಸ್ಟ್‌ನಿಂದ ೧೮೯೬ನೇ
ಡಿಸೆಂಬರ್‌ವರೆಗೆ, ಮೂರುಬಾರಿ ಲಂಡನ್ನಿಗೆ ಭೇಟಿ
ಇತ್ತರು. ಇಲ್ಲಿ ಅವರು ನೀಡಿದ ಉಪನ್ಯಾಸಗಳು
ಆಂಗ್ಲರ ಮೇಲೆ ಅದ್ಭುತ ಪರಿಣಾಮವನ್ನು ಬೀರಿದವು.
ಹಿಂದೂಧರ್ಮದ ಬಗ್ಗೆ ಸ್ವಾಮೀಜಿಯವರಿಗಿದ್ದ
ಅಗಾಧ ಜ್ಞಾನವು ಆಧ್ಯಾತ್ಮಿಕ ಶಕ್ತಿಯನ್ನು
ಪ್ರಚೋದಿಸುವ ಅವರ ವಿದ್ವತ್‌ಪೂರ್ಣ
ವಾಗ್ಧಾರೆಯ ಮೂಲಕ ಹರಿದು, ಎಲ್ಲರ
ಮನಸ್ಸನ್ನೂ ಸೂರೆಗೊಂಡಿತು. ಯಾರೂ
ಬಿಡದೆ ಎಲ್ಲರೂ ಅವರನ್ನು ಗೌರವಿಸಿದರು.
೧೮೯೫ರ ಜೂನ್ ತಿಂಗಳ ೧೯ ರ
ನಂತರ, ಹತ್ತು  ಹನ್ನೆರಡು ಆಸಕ್ತ
ಶಿಷ್ಯರುಗಳಿಗೆ, ಧ್ಯಾನ, ಪ್ರಾರ್ಥನೆ,
ಅಧ್ಯಯನ ಹಾಗೂ ಇನ್ನಿತರ ಆಧ್ಯಾತ್ಮಿಕ
ವಿಚಾರಗಳ ಬಗ್ಗೆ ಸಹಸ್ರ ದ್ವೀಪೋದ್ಯಾನ
ಎಂಬ ಏಕಾಂತ ಸ್ಥಳದಲ್ಲಿ ನಡೆದ
ಆಧ್ಯಾತ್ಮಿಕಶಿಬಿರದಲ್ಲಿ, ಏಳುವಾರಗಳ
ಕಾಲ ತರಬೇತಿ ಕೊಟ್ಟರು. ಅಲ್ಲಿ
ಸ್ವಾಮೀಜಿ ತಮ್ಮ ಅಪಾರ ಆಧ್ಯಾತ್ಮಿಕ
ಜ್ಞಾನದ ಪರಿಚಯವನ್ನು ಶಿಷ್ಯರಿಗೆ
ಮಾಡಿಕೊಟ್ಟರು.
ಸಮ್ಮೇಳನದಲ್ಲಿ
ಅವರ ಪ್ರಭಾವಶಾಲಿ
ವ್ಯಕ್ತಿತ್ವದ ಜನಪ್ರಿಯತೆ
ಪ್ರಶ್ನಾತೀತವಾದದ್ದು.
ಜನರು ಅವರ
ಉಪನ್ಯಾಸದ ಪ್ರತಿ
ಯೊಂದು ಶಬ್ದವನ್ನೂ
ಗಮನವಿಟ್ಟು ಕೇಳಲು
ಕಾತರರಾಗಿದ್ದರು.
ಅದಕ್ಕಾಗಿ ಗುಂಪು
ಗುಂಪಾಗಿ ಜನರು
ಬಂದು ಗಂಟೆಗಟ್ಟಲೆ
ಕಾಯುತ್ತ ಕುಳಿತು
ಕೊಳ್ಳುತ್ತಿದ್ದರು.
ಸ್ವಾಮೀಜಿ ಶೀಘ್ರದಲ್ಲಿಯೇ ನಮ್ಮನ್ನು ಬಿಟ್ಟು
ಹೋಗುತ್ತಿದ್ದಾರೆ. ಪುನಃ ಅವರ ದರ್ಶನಭಾಗ್ಯ
ದೊರಕುತ್ತದೆ ಅನ್ನಿಸುತ್ತಿಲ್ಲ. ಆದರೆ ನಮ್ಮ
ಉಳಿದ ಬದುಕನ್ನು ನೆಮ್ಮದಿಯಿಂದ
ಕಳೆಯುವಂತಹ ಅಮೂಲ್ಯವಾದ
ಆನಂದವನ್ನು ನಮ್ಮ ಮನಗಳಲ್ಲಿ ಅವರು
ಅಚ್ಚೊತ್ತಿದ್ದಾರೆ.
ಇನ್ನು ಸ್ವಾಮೀಜಿಯವರು ತಾಯ್ನಾಡಿಗೆ
ಮರಳಲು ಬಯಸಿದರು. ೧೮೯೬,
ಡಿಸೆಂಬರ್ ೧೬ನೇ ದಿನಾಂಕದಂದು
ಪ್ರಯಾಣಕ್ಕೆ ಸಿದ್ಧತೆಗಳಾದವು.
ಇದರಿಂದಾಗಿ ಅವರ ಅನುಯಾಯಿಗಳಿಗೆ
ದುಃಖವಾಯಿತು. ಆದರೆ, ಸಾತ್ವಿಕ
ಜೀವನ ಹಾಗೂ ಆಧ್ಯಾತ್ಮಿಕ ಬಾಳ್ವೆ
ನಡೆಸಲು ಅವರಿಗೆಲ್ಲ ಸ್ವಾಮೀಜಿ ಪ್ರೇರಣೆ
ಇತ್ತಿದ್ದರು. ಆ ಮೂಲಕ ಶಾಂತಿಯನ್ನೂ
ಸಂತೋಷವನ್ನೂ ಪಡೆಯಲು
ಸ್ಫೂರ್ತಿಯನ್ನಿತ್ತಿದ್ದರು. ಇದರಿಂದಾಗಿ
ಅವರೆಲ್ಲರೂ ಆತ್ಮಸಂತೋಷವನ್ನು
ಪಡೆದಿದ್ದರು.